ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಕೊಪ್ಪಳ ಜಿಲ್ಲೆಯ ಉಸ್ತುವಾರಿ ಸಚಿವರು ಇಲ್ಲಿಯೇ ಇದ್ದಾರೆ. ಅವರು ಇದಕ್ಕೆ ಸಂಬಂಧಪಟ್ಟಂತೆ ಉತ್ತರ ಕೊಡುತ್ತಾರೆ. ಆದ್ದರಿಂದ, ಅವರು ಹೇಳುವುದನ್ನು ಸ್ವಲ್ಪ ಕೇಳಿ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮೊದಲು ನಾವು ಮಾತನಾಡುವುದಕ್ಕೆ ಅವಕಾಶ ಕೊಡಿ. ಅನಂತರ ಮಂತ್ರಿಗಳು ಉತ್ತರ ಕೊಡಲಿ.

(ಗೊಂದಲ)

ಅಧ್ಯಕ್ಷರು : ನಿಮ್ಮ ಜಿಲ್ಲಾ ಮಂತ್ರಿಯವರು ಉತ್ತರ ಕೊಡುತ್ತಾರೆ. ಅಲ್ಲಿ ಕೇವಲ ರಿಪೇರಿ ಕೆಲಸ ಆಗಬೇಕಷ್ಟೆ ತಾನೆ.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ತುಂಗಭದ್ರ ಎಡದಂಡೆ ಕಾಲುವೆ ಗಂಗಾವತಿಯಲ್ಲಿ ಒಡೆದಿರತಕ್ಕಂಥದ್ದು ನಿಜ. ನಾನೂ ಕೂಡ ಸ್ಥಳಕ್ಕೆ ಹೋಗಿ ನೋಡಿದ್ದೇನೆ. ಈಗಾಗಲೇ ಅಲ್ಲಿ ಕೆಲಸ ಪ್ರಾರಂಭ ಆಗಿದೆ. ಇವತ್ತು ಅಥವಾ ನಾಳೆಯೊಳಗೆ ಸದರಿ ಕೆಲಸ ಪೂರ್ಣಗೊಳ್ಳುತ್ತದೆ. ಕುಡಿಯುವ ನೀರನ್ನು ಬಿಡುತ್ತೇವೆಂದು ನಾವೇನು ಮೊನ್ನೆ ದಿವಸ ನಡೆದಂಥ ಸಭೆಯಲ್ಲಿ ನಿರ್ಣಯ ತೆಗೆದುಕೊಂಡಿದ್ದೆವೋ ಅದರ ಪ್ರಕಾರ ನಾಳೆಯಿಂದ 30 ನೇ ತಾರೀಖಿನವರೆಗೆ ಕುಡಿಯುವ ನೀರಿಗೋಸ್ಕರ ನೀರನ್ನು ಬಿಡುತ್ತೇವೆ. ಆದರೆ, ಮುಂದಿನ ಬೆಳೆಗೋಸ್ಕರ ಯಾವ ರೀತಿಯಲ್ಲಿ ನೀರನ್ನು ಬಿಡಬೇಕೆಂಬುದರ ಬಗ್ಗೆ ಬೆಂಗಳೂರಿನಲ್ಲಿ ಸಭೆ ಕರೆದು ಸವಿಸ್ತಾರವಾಗಿ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳೋಣ. ಮಾನ್ಯ ಸದಸ್ಯರೂ ಕೂಡ ಆ ಒಂದು ಸಮಿತಿಯ ಸದಸ್ಯರಾಗಿದ್ದಾರೆ. ಆದರೆ ಮೊನ್ನೆ ನಡೆದ ಸಭೆಗೆ ಅವರು ಬಂದಿರಲಿಲ್ಲ. ಆದರೆ, ಸರ್ಕಾರ ಮಾತ್ರ ಏನು ಒಳ್ಳೆಯದು ಆಗಬೇಕೆಂದು ಯೋಜನೆ ಹಾಕಿಕೊಂಡಿದೆಯೋ ಅದನ್ನು ಖಂಡಿತ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಅಧ್ಯಕ್ಷರೆ, ಕಾಲುವೆಯಲ್ಲಿ ನೀರನ್ನು ಬಿಟ್ಟರೆ ಮತ್ತೆ ಕಾಲುವೆ ಒಡೆಯತಕ್ಕಂಥ ಸಂದರ್ಭ ಇದೆ.

Mr. Speaker : No supplimentaries and no cross questions in Zero Hour. You please take your seat Mr. Karadi Sanganna. ತಾವು ದಯವಿಟ್ಟು ಕುಳಿತುಕೊಳ್ಳಿ.

ಇ) ವಿಷಯ:– ಚಿತ್ರಮಂದಿರಗಳ ಸೇವಾಶುಲ್ಕದ ಬಗ್ಗೆ

†**ಶ್ರೀ ಶಿವಾನಂದ ಎಸ್. ಪಾಟೀಲ್** : ಮಾನ್ಯ ಅಧ್ಯಕ್ಷರೆ, ನಾನು ಒಂದು ಸಣ್ಣ ವಿಷಯವನ್ನು ಮಾನ್ಯ ಹಿರಿಯ ಸಚಿವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ, ಇವತ್ತಿನ ದಿವಸ ಈ ವಿಷಯ ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ರಾಜ್ಯದಲ್ಲಿರತಕ್ಕಂಥ ಚಿತ್ರಮಂದಿರಗಳ ಸೇವಾ ಶುಲ್ಕದ ಬಗ್ಗೆ ಒಂದು ತೀರ್ಮಾನ ಇವತ್ತು ತೆಗೆದುಕೊಳ್ಳುತ್ತೀರಿ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಚಿತ್ರ ಮಂದಿರದ ಮಾಲೀಕರೂ ಕೂಡ ತಮ್ಮ ಅಳಲನ್ನು ತಮ್ಮ ಜೊತೆ ತೋಡಿಕೊಂಡಿದ್ದಾರೆ. ಇವತ್ತಿನದಿವಸ ಕೇಬಲ್ ಟಿ.ವಿ., ಸಿ.ಡಿ., ಮತ್ತು ಆಡಿಯೋ, ವಿಡಿಯೋ ಬಂದ ಮೇಲೆ ಚಿತ್ರ ಮಂದಿರಗಳ ಮಾಲೀಕರಿಗೆ ಅನೇಕ ತೊಂದರೆಗಳಾಗಿವೆ. ಇದಕ್ಕೆ ಸಂಬಂಧಪಟ್ಟಂತೆ ಅವರೂ ಒಂದು ಮನವಿ ಪತ್ರವನ್ನು ತಮಗೆ ಕೊಟ್ಟಿದ್ದಾರೆ. ಹಾಗೆಯೇ, ತಾವೂ ಕೂಡ ಒಂದು ಸಭೆ ಮಾಡಿದ್ದೀರಿ. ಆದ್ದರಿಂದ, ಅವರ ವಿಚಾರ ಏನಿದೆ ಅದರ

ಬಗ್ಗೆ ಸ್ವಲ್ಪ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಅಲ್ಲಂ ವೀರಭದ್ರಪ್ಪನವರು ಕೂಡ ಎರಡು ಸಿನಿಮಾ ಮಂದಿರದ ಮಾಲೀಕರಾಗಿದ್ದಾರೆ. ಆದ್ದರಿಂದ ಎರಡು ಕಡೆಯ ವಾದದ ಸಾಧಕ-ಬಾಧಕಗಳನ್ನು ನೋಡಿಕೊಂಡು ತೀರ್ಮಾನ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಅವರಿಗೆ ಗೊತ್ತಿದೆ.

ಶ್ರೀ ಶಿವಾನಂದ ಎಸ್. ಪಾಟೀಲ್ :-ಅವರಿಗೆ ಗೊತ್ತಿದೆ. ಆದರೆ, ಅವರು ರಾಜಕುಮಾರ್‌ರವರ ನೋವನ್ನೂ ಕೇಳುವುದಕ್ಕೆ ಹೋದರು. ಆದ್ದರಿಂದ ನಮಗೆ ಭಯವಾಗಿದೆಯಷ್ಟೆ.

Mr. Speaker: No supplimentaries please. You cannot ask.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರೂ ಕೂಡ ಸಿನಿಮಾ ಮಂದಿರದ ಮಾಲೀಕರಾಗಿದ್ದಾರೆ. ಆದ್ದರಿಂದ ಏನು ನೋವಿದೆ ಎನ್ನುತಕ್ಕಂಥದ್ದು ಅವರಿಗೆ ಗೊತ್ತಿದೆ. ಮತ್ತೆ ನಿಮಗೇನು ಗೊತ್ತಿದೆಯೋ ಅದು ಅವರಿಗೂ ಕೂಡ ಗೊತ್ತಿದೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ನಮಗೆ ಗೊತ್ತಿದೆ. ಆದರೆ, ಅವರು ರಾಜಕುಮಾರ್‌ರವರ ನೋವು ಕೇಳುವುದಕ್ಕೆ ಹೋಗಿದ್ದರು. ಆದ್ದರಿಂದ ನಮಗೆ ಭಯವಾಗಿತ್ತು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ನೀವು ಬೇಸರವನ್ನು ಮಾಡಿಕೊಳ್ಳಬೇಡಿ, ಕೋಪದಲ್ಲಿದ್ದಿರಲ್ಲಾ ಏಕೆ?

ಅಧ್ಯಕ್ಷರು : ಇಲ್ಲಾ ಸ್ವಾಮಿ, ಶೂನ್ಯವೇಳೆಯಲ್ಲಿ ಸಪ್ಲಿಮೆಂಟರೀಸ್ ಇಲ್ಲವೆಂದರೂ ಕೇಳುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಕೋಪ ಮಾಡಿಕೊಳ್ಳಬೇಡಿ, ನೀವು ನಿಧಾನವಾಗಿ ಹೇಳಿ.

ಅಧ್ಯಕ್ಷರು : ಕೋಪ ಬರದೇ ಇನ್ನೇನು ಬರುತ್ತದೆ; ಇಲ್ಲಿ ನೀವೇ ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಎಲ್ಲಿ ಕೋಪ ಮಾಡಿಕೊಳ್ಳಬೇಕು, ಅಲ್ಲಿ ಕೋಪವನ್ನು ಮಾಡಿಕೊಳ್ಳುವುದಿಲ್ಲ. ಬಾಕಿ ಟೈಮ್‌ನಲ್ಲಿ ನೀವು ಕೋಪ ಮಾಡಿಕೊಳ್ಳಬೇಡಿ.

ಅಧ್ಯಕ್ಷರು : ಶೂನ್ಯವೇಳೆಯಲ್ಲಿ ಸಪ್ಲಿಮೆಂಟರೀಸ್ ಇಲ್ಲವೆಂದು ತಮಗೆಲ್ಲರಿಗೂ ಗೊತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಏಕೆಂದರೆ ಇಡೀ ಚಿತ್ರೋದ್ಯಮ ನಿಂತಿದೆ. ಇದು ಬಹಳ ಮಹತ್ವವಾಗಿರತಕ್ಕಂಥ ವಿಚಾರ, ಬೇಕಾದಷ್ಟು ಸದಸ್ಯರು ಸದನದಲ್ಲಿ ತಮ್ಮ ವಿಚಾರವನ್ನು ಮಂಡನೆ ಮಾಡಬೇಕೆಂದಿದ್ದಾರೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಿಮಗೆ ಕ್ರಮಬದ್ಧವಾಗಿ ಹೇಳಲಿಕ್ಕೆ ಒಂದು ಕ್ರಮ ಇದೆ, ಅದನ್ನು ಬರೆದು ಕೊಡಬೇಕು, ನಂತರ ನೀವು ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕು. ಇದು ಎಲ್ಲವನ್ನೂ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ದಯಮಾಡಿ ಈ ಸದನದ ಭಾವನೆಯನ್ನು ತಿಳಿದುಕೊಂಡು ನಮಗೆ ಒಂದು ಅವಕಾಶವನ್ನು ಮಾಡಿಕೊಡಿ. ಪೂರ್ತಿ ವಿಚಾರವನ್ನು ನಾನು ಇನ್ನು ಹೇಳಲಿಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಚಿತ್ರಮಂದಿರಗಳು ಮುಚ್ಚಿಹೋಗಿವೆ. ಇತ್ತೀಚೆಗೆ ಕೆಇಬಿ ಯವರ ಟ್ಯಾರೀಫ್ ಕೂಡ ನಿಮಗೆ ಗೊತ್ತಿದೆ. ಎಂಟರ್‌ಟೇನ್‌ಮೆಂಟ್ ಟ್ಯಾರಿಫ್ ಕೂಡ ನಿಮಗೆ ಗೊತ್ತಿದೆ. ಈ ಹಿನ್ನೆಲೆಯಲ್ಲಿ ಎಲ್ಲಾ ವಿಚಾರಗಳನ್ನು ತಾವು ಗಮನಕ್ಕೆ ತೆಗೆದುಕೊಂಡು ಅವರ ಅಳಲು ಏನಿದೆ, ಅದರ ಬಗ್ಗೆ ತಾವು ಕೇಳಿಕೊಂಡು ಅದರ ಬಗ್ಗೆ ತಾವು ಒಂದು ಯೋಗ್ಯ ನಿರ್ಣಯವನ್ನು ತೆಗೆದುಕೊಳ್ಳುತ್ತೀರಿ ಎಂದು ನಾನು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇದರಲ್ಲಿ ತಾವು ಯಾರದೇ ಒಂದು ಪ್ರೆಷರ್‌ಗೆ ಯೀಲ್ಡ್ ಆಗಬಾರದು. ಏಕೆಂದರೆ ಅವರು

ಚಿತ್ರಮಂದಿರದ ಮಾಲೀಕರಾಗಿ ಯಾರ ಮನೆಗೆ ಹೋಗಿ ಬಂದರು ಅದು ನಿಮಗೆ ಗೊತ್ತಿದೆ. ಅದೆಲ್ಲವನ್ನೂ ನಾನು ಹೇಳಿದರೆ ಮಾನ್ಯ ಅಧ್ಯಕ್ಷರು ಕೋಪವನ್ನು ಮಾಡಿಕೊಳ್ಳುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಆ ಕಡೆ ಮತ್ತು ಈ ಕಡೆ ಒಂದು ವಾದ ಇದೆ. ಎರಡರ ಬಗ್ಗೆ ಕೂಡ ತಾವು ಬ್ಯಾಲೆನ್ಸ್ ಆಗಿ ತೆಗೆದುಕೊಂಡು ಹೋಗಬೇಕಾಗುತ್ತದೆ. ಇಲ್ಲಿಯವರೆಗೆ ಸೇವಾಶುಲ್ಕ ಇದ್ದಂಥದ್ದು ಇದೆ. ಅವರ ತೊಂದರೆ ಏನಾಗುತ್ತದೆ, ನೀವು ಸೇವಾ ಶುಲ್ಕವನ್ನು ರದ್ದು ಮಾಡಿದರೆ, ಅದರ ಇನ್‌ಫ್ಯಾಕ್ಟ್ ಏನಾಗುತ್ತದೆ, ಬೆಂಗಳೂರು ಚಿತ್ರಮಂದಿರದ ಬಗ್ಗೆ ನನಗೆ ಏನು ಗೊತ್ತಿಲ್ಲ, ಆದರೆ ನಮ್ಮ ಉತ್ತರ ಕರ್ನಾಟಕದ ಭಾಗದಲ್ಲಿ ಇರತಕ್ಕಂಥ, ಬಿ ಮತ್ತು ಸಿ ಕೇಂದ್ರಗಳಲ್ಲಿರತಕ್ಕಂಥ ಚಿತ್ರಮಂದಿರಗಳು ಬಹುಶಃ ನನಗೆನಿಸುತ್ತದೆ, ಸೇವಾ ಶುಲ್ಕವನ್ನು ರದ್ದು ಮಾಡಿದರೆ ಅವೆಲ್ಲಾ ಮುಚ್ಚಿ ಹೋಗುವಂಥ ಪರಿಸ್ಥಿತಿ ಇದೆ. ಕೆಲವು ನಿರ್ಮಾಪಕರ ಅಳಲು ಏನಿದೆ, ಅವರದ್ದು ಕೇಳಿಕೊಂಡಿದ್ದೇನೆ, ಅವರಿಗೆ ಏನು ತೊಂದರೆಗಳು ಇವೆ, ಅವುಗಳನ್ನು ನಿವಾರಣೆ ಮಾಡಲಿಕ್ಕೆ ಇಂಥದ್ದರಲ್ಲಿ ಒಂದು ಬ್ಯಾಲೆನ್ಸ್ ಆಗಿ ಆಕ್ಟ್ ಮಾಡುವಂಥದ್ದು, ಇಂಥದ್ದರಲ್ಲಿ ನಿಮ್ಮ ಸಾಯಂಕಾಲ ಕ್ಯಾಬಿನೆಟ್ ಮೀಟಿಂಗ್ ಇದೆ ಎನ್ನುವಂಥದ್ದು ತಿಳಿದು ಬಂದಿದೆ, ಅದರಲ್ಲಿ ನಿರ್ಣಯವಾಗುತ್ತದೆ ಎನ್ನುವಂಥದ್ದು ಬಹಳ ಜನರಲ್ಲಿ ಇದೆ. ಹೀಗಾಗಿ ಇದರ ಬಗ್ಗೆ ಒಂದು ಬ್ಯಾಲೆನ್ಸ್ ಡಿಸಿಷನ್ ತೆಗೆದುಕೊಳ್ಳಬೇಕು ಅಥವಾ ಇನ್ನು ಏನಾದರೂ ಸಮಸ್ಯೆಗಳು ಇದ್ದರೆ, ಇಬ್ಬರನ್ನು ಕರೆಸಿ ಅವರಿಗೆ ಒಂದು ಕಾಲಾವಕಾಶವನ್ನು ಕೊಡಿ, ತರಾತುರಿಯಿಂದ ಏನಾದರೂ ಒಂದು ನಿರ್ಣಯವನ್ನು ತೆಗೆದುಕೊಳ್ಳುವುದು ಬೇಡ. ಅದರಿಂದ ಬಹಳಷ್ಟು ಗೊಂದಲಗಳು ನಿರ್ಮಾಣವಾಗುತ್ತವೆ.

ಶ್ರೀ ಹಂಪನಗೌಡ ಬಾದರ್ಲಿ(ಸಿಂಧನೂರ) : ಮಾನ್ಯ ಅಧ್ಯಕ್ಷರೆ, ಚಿತ್ರಮಂದಿರಗಳ ಮಾಲೀಕರ ಪರವಾಗಿ ಸದನದಲ್ಲಿರತಕ್ಕಂಥವರಲ್ಲಿ ಒಬ್ಬರು ಮಾನ್ಯ ಮಂತ್ರಿಗಳೂ ಕೂಡ; ನಾವು ಹಾಗೂ ಇನ್ನಿತರ ಕೆಲವು ಮಿತ್ರರು ಇದ್ದೇವೆ. ದಯವಿಟ್ಟು ನಾವು ಹೇಳತಕ್ಕಂಥ ಕೆಲವು ವಿಚಾರಗಳನ್ನು ಸರ್ಕಾರ ಗಮನಹರಿಸಿ, ಇವತ್ತು ರಾಜ್ಯದಲ್ಲಿ ಸುಮಾರು 1100 ಚಿತ್ರಮಂದಿರಗಳು ಇವೆ. ಇದರಲ್ಲಿ 400 ಚಿತ್ರಮಂದಿರಗಳು ಮುಚ್ಚಿ ಹೋಗಿವೆ. ಇನ್ನುಳಿದ 700–800 ಚಿತ್ರಮಂದಿರಗಳು ಮಾತ್ರ ನಡೆಯುತ್ತಿವೆ. ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ, ಆ ಚಿತ್ರಮಂದಿರಗಳು ಸ್ವಚ್ಛತೆಯಿಂದಿರಬೇಕು, ಪ್ರೇಕ್ಷಕರಿಗೆ ಅನುಕೂಲಕರವಾದಂಥ ವಾತಾವರಣ ಇರಬೇಕು. ಹವಾ ನಿಯಂತ್ರಣ ಇರಬೇಕು ಎನ್ನುವ ಉದ್ದೇಶದಿಂದ 1993ರಲ್ಲಿ ರಾಜ್ಯ ಸರ್ಕಾರ ಸೇವಾ ಶುಲ್ಕವನ್ನು ವಿಧಿಸಿ ಆ ಸೇವಾ ಶುಲ್ಕದ ಅಡಿಯಲ್ಲಿ ಇವತ್ತು ಚಿತ್ರಮಂದಿರಗಳು ನಡೆಯುತ್ತಿರುತ್ತವೆ. ಇವತ್ತು ಆ ಚಿತ್ರಮಂದಿರಗಳ ಪರಿಸ್ಥಿತಿ ಏನಗಿದೆ ಎಂದರೆ, ಕೇಬಲ್ ಟಿವಿ, ಚ್ಯಾನಲ್‌ಗಳಲ್ಲಿ ದಿನಕ್ಕೆ 4 ರವರೆಗೆ ಫಿಕ್ಚರ್‌ಗಳನ್ನು ಹಾಕುತ್ತಾರೆ. ಜನರು ಚಿತ್ರಮಂದಿರಗಳಿಗೆ ಬರುವುದೇ ಕಡಿಮೆಯಾಗಿದೆ. ಚಿತ್ರಮಂದಿರದಲ್ಲಿ ಇವತ್ತು ಆಕ್ಯುಪೆನ್ಸಿ 20 ರಿಂದ 30 ಪರ್ಸೆಂಟ್ ಇದೆ. ಒಂದು ವಾರ ಫಿಕ್ಚರ್ ಓಡಿದರೆ ಅದು ಎರಡನೆಯ ವಾರ ಓಡುವುದಿಲ್ಲ. ಇಂತಹ ಸಂದರ್ಭಗಳು ಇರುವುದರಿಂದ ಕನ್ನಡ ಚಿತ್ರಮಂದಿರಗಳು ಅಂದರೆ ಕನ್ನಡ ಚಿತ್ರರಂಗ ಉಳಿಯಬೇಕಾದರೆ, ಈ ಚಿತ್ರಮಂದಿರಗಳಿಗೆ ರಾಜ್ಯ ಸರ್ಕಾರ ಈಗ ಏನು ಸವಲತ್ತುಗಳನ್ನು ಒದಗಿಸಿದೆ, ಸೇವಾ ಶುಲ್ಕವನ್ನು ಮುಂದುವರೆಸಬೇಕು. ಎಂಟರ್‌ಟೇನ್‌ಮೆಂಟ್ ಟ್ಯಾಕ್ಸ್ ಬೇರೆ ರಾಜ್ಯಗಳಲ್ಲಿ 70 ಪರ್ಸೆಂಟ್ ಇದೆ, ಆಂಧ್ರಪ್ರದೇಶದಲ್ಲಿ 30 ಪರ್ಸೆಂಟ್ ಇದೆ, ಅದೇ ರೀತಿ ಬೇರೆ ಬೇರೆ ಶುಲ್ಕಗಳನ್ನೂ ಕೂಡ ಕಡಿಮೆ ಮಾಡಿ ಈ ಚಿತ್ರಮಂದಿರಗಳನ್ನು ಉಳಿಸುವಂಥ ಕೆಲಸ ರಾಜ್ಯ ಸರ್ಕಾರದಿಂದ ಆಗಬೇಕು ಎನ್ನುವ ಒತ್ತಾಯವನ್ನು ಹಾಗೂ ಮನವಿಯನ್ನು ತಮ್ಮ ಮೂಲಕ ನಾನು ಮಾನ್ಯ ಮಂತ್ರಿಗಳಿಗೆ ಸಲ್ಲಿಸುತ್ತೇನೆ.

†ಶ್ರೀ ಪಿ.ಜಿ.ಆರ್.ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಸರ್ಕಾರ ಎನ್ನತಕ್ಕಂಥದ್ದು ತಾಯಿ ಇದ್ದ ಹಾಗೆ ಇರಬೇಕಾಗುತ್ತದೆ. ತಾಯಿ ಎಲ್ಲಾ ಮಕ್ಕಳನ್ನು ಸಹಿತ ಸರಿಸಮಾನವಾಗಿ ನೋಡತಕ್ಕಂಥ ಕೆಲಸವನ್ನು ಮಾಡಬೇಕಾಗುತ್ತದೆ. ಕಳೆದ 15 ದಿವಸಗಳಲ್ಲಿ ಕೆಲವು ಚಿತ್ರ ನಿರ್ಮಾಪಕರು ಇರಬಹುದು, ಅಥವಾ ಚಿತ್ರಮಂದಿರದ ಮಾಲೀಕರು ಇರಬಹುದು. ಆಗಿರತಕ್ಕಂಥ ಬೆಳವಣಿಗೆ ನಮಗೆ ಯಾರಿಗೂ ಸಹಿತ ಸಮಾಧಾನ ತಂದಿಲ್ಲ. ಸರ್ಕಾರ ಯಾವತ್ತೂ ಸಹಿತ ಒತ್ತಡಗಳಿಗೆ ಮಣಿದು ತೀರ್ಮಗಳನ್ನು ಮಾಡಬಾರದು. ನಿಮಗೆ ಗೊತ್ತಿರುವ ಹಾಗೆ ಕನ್ನಡ ಚಿತ್ರಗಳಿಗೆ ನಾವು ಪ್ರೋತ್ಸಾಹವನ್ನು ಕೊಡಬೇಕೆಂದು ಹೇಳಿ 100ಕ್ಕೆ 100 ರಷ್ಟು ತೆರಿಗೆ ವಿನಾಯಿತಿಯನ್ನು ನಾವು ಮಾಡಿದ್ದೇವೆ. ಬಹುಶಃ ನಮ್ಮ ರಾಜ್ಯದಲ್ಲಿ ಕೊಟ್ಟಿರುವಷ್ಟು ವಿನಾಯಿತಿ ಬೇರೆ ಯಾವ ರಾಜ್ಯಗಳಲ್ಲಿಯೂ ಸಹಿತ ಕೊಟ್ಟಿಲ್ಲ. ಅದರ ಜೊತೆಗೆ ಪ್ರೇಕ್ಷಕರಿಗೂ ಸಹಿತ ಅನುಕೂಲವಾಗಬೇಕು ಎನ್ನುವ ಸಲುವಾಗಿ ನಮ್ಮ ಸರ್ಕಾರ ಇದ್ದಂಥ ಸನ್ನಿವೇಶದಲ್ಲಿ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳು ಆಗಿದ್ದಂಥ ಸಂದರ್ಭದಲ್ಲಿ ಇದನ್ನು ಪ್ರಾರಂಭ ಮಾಡಿದ್ದು, ಆಗ ಮಾನ್ಯ ದೇಶಪಾಂಡೆಯವರು ವಿರೋಧ ಪಕ್ಷದ ನಾಯಕರಾಗಿದ್ದರು, ಈ ವಿಚಾರ ಪ್ರಸ್ತಾಪವಾಯಿತು. ಇದೇ ರೀತಿಯ ಗಲಾಟೆಯಾಯಿತು, ಆ ಸಂದರ್ಭದಲ್ಲಿ ಎಂಟಾಣೆಯಿಂದ ಪ್ರಾರಂಭವಾಗಿರತಕ್ಕಂಥ ಒಂದು ವಿಚಾರ ಇದು. ಈಗ ಸಿನೆಮಾಟೊಗ್ರಫಿ ಕಾಯಿದೆ ಏನಿದೆ ಅದು ಹೋಮ್ ಮಿನಿಸ್ಟರ್ ಆಡಳಿತದೊಳಗೆ ಬರುತ್ತದೆ. ಸಿನೆಮಾಟೊಗ್ರಫಿ ಕಾಯಿದೆಯೊಳಗಡೆ ಡೆಪ್ಯುಟಿ ಕಮಿಷನರ್ ಹಾಗೂ ಎಸ್‌ಪಿ--ಯವರಿಗೆ ಹೇಳಿ, ಎಲ್ಲಿ ಮಂದಿರಗಳು ಸರಿಯಾಗಿಲ್ಲ, ಎಲ್ಲಿ ಚಿತ್ರ ಮಂದಿರಗಳಲ್ಲಿ ಪ್ರೇಕ್ಷಕರಿಗೆ ಸರಿಯಾದ ಸವಲತ್ತುಗಳನ್ನು ಕೊಡುತ್ತಿಲ್ಲ ಅಂತಹ ಕಡೆ ಕ್ರಮ ತೆಗೆದುಕೊಳ್ಳುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆ. ನಾವು ಅದನ್ನು ಬಿಟ್ಟು ನೆಗಡಿ ಬಂದಿದೆ ಎಂದು ಮೂಗನ್ನು ಕಿತ್ತು ಹಾಕತಕ್ಕಂಥ ಕೆಲಸ ಮಾಡುವುದರಿಂದ ಅದು ಉಪಯೋಗವಾಗುವುದಿಲ್ಲ. ಅದು ಮತ್ತಷ್ಟು ವಿಕೃತವಾಗುತ್ತದೆ. ನಾನು ಸರ್ಕಾರಕ್ಕೆ ಸಲಹೆ ಮಾಡುವುದು ಈ ಸಂದರ್ಭದಲ್ಲಿ ಏನೆಂದರೆ, ಸರ್ಕಾರ ತಾಯಿ ಇದ್ದ ಹಾಗೆ ನೀವು ಯಾರ ಪರವಾಗಿ ಇದ್ದೇವೆ ಎನ್ನುವುದನ್ನು ತೋರಿಸಿಕೊಳ್ಳುವುದಕ್ಕೆ ಹೋಗಬಾರದು. ಅದನ್ನು ಮಾಡಲೂಬಾರದು. ಆದ್ದರಿಂದ ನನಗೆ ಅನ್ನಿಸತಕ್ಕಂಥದ್ದು ಇದನ್ನು ಅಲ್ಲಿಗೆ ಬಿಡಿ, ಅವರೆ ಒಂದು ಸಂಧಾನಕ್ಕೆ ಬರುತ್ತಾರೆ. ಅವರೆ ಒಂದು ತೀರ್ಪಿಗೆ ಬರಬೇಕಾಗುತ್ತದೆ, ನಿಮಗೆ ಗೊತ್ತಿರುವಂತೆ 30--40 ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಓದುವಾಗ ಮೆಜೆಸ್ಟಿಕ್ ಎಂದು ಹೆಸರು ಬಂದಿರುವುದು ಮೆಜೆಸ್ಟಿಕ್ ಥಿಯೇಟರ್‌ದಿಂದಾಗಿ ಇವತ್ತು ಆ ಎಲ್ಲಾ ಚಿತ್ರಮಂದಿರಗಳು ಸಹಿತ ಕಮರ್ಷಿಯಲ್ ಕಾಂಪ್ಲೆಕ್ಸ್‌ಗಳಾಗಿರತಕ್ಕಂಥದ್ದು ನಮ್ಮ ಗಮನಕ್ಕೆ ಬಂದಿದೆ. ಎಲ್ಲಾ ಸಿನೆಮಾ ಥಿಯೇಟರ್‌ಗಳು ಸಹಿತ ಕಲ್ಯಾಣ ಮಂದಿರಗಳು ಆಗಿರತಕ್ಕಂಥದ್ದನ್ನು ನಾವು ನೋಡುತ್ತಿದ್ದೇವೆ. ಕೆಲವು ಸಿನಿಮಾಗಳನ್ನು ಕಳ್ಳತನದಲ್ಲಿ ನೋಡಬಾರದು, ಅವುಗಳನ್ನು ತೋರಿಸಬಾರದು ಎನ್ನತಕ್ಕಂಥದ್ದು ಅದರ ಬಗ್ಗೆ ಕೆಲವು ಕಡೆ ಆಗುವುದಕ್ಕೆ ಇಬ್ಬರೂ ಕಾರಣಕರ್ತರಿದ್ದಾರೆ. ಅದಕ್ಕಾಗಿ ಸರ್ಕಾರ ತನ್ನ ದಿಟ್ಟತನವನ್ನು ತೋರಿಸುವುದರ ಜೊತೆಗೆ ತಾಯಿಯ ಮಾದರಿಯಲ್ಲಿ ಕೆಲಸವನ್ನು ಮಾಡಬೇಕಾಗುತ್ತದೆ. ಆದ್ದರಿಂದ ನೀವು ತುರ್ತಾಗಿ ಯಾವುದೋ ಒಂದು ಒತ್ತಡಕ್ಕೆ ಒಳಗಾಗಿ ದಯವಿಟ್ಟು ನೀವು ಸಚಿವ ಸಂಪುಟದಲ್ಲಿ ತೀರ್ಮಾನಕ್ಕೆ ಬರುವುದಕ್ಕೆ ಹೋಗಬೇಡಿ, ನೀವು ಸಂಪುಟ ದರ್ಜೆಯ ಸಚಿವರಿದ್ದೀರಿ, ಇದರ ಬಗ್ಗೆ ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಎಲ್ಲಾ ವಿಚಾರಗಳು ಗೊತ್ತಿದೆ. ಅದಕ್ಕೋಸ್ಕರ ನೀವು ನಗುತ್ತಿರುವುದು ನೀವು ಆನಂದವನ್ನು ಅನುಭವಿಸುತ್ತಿದ್ದೀರಿ? ಎಲ್ಲರಿಗೂ ಸಹಿತ ಮನಸ್ಸಿನಲ್ಲಿ ಒಂದು ಇದೆ, ಮಾಡತಕ್ಕಂಥದ್ದು ಒಂದಾಗಿದೆ. ಮನಸ್ಸಿನಲ್ಲಿ ಏನಿದೆ ಎನ್ನುವುದರ ಬಗ್ಗೆ ಬೇಕಾದರೆ

ನಾನು ಹೇಳುವುದಕ್ಕೆ ತಯಾರಾಗಿದ್ದೇನೆ, ನಿಮಗೆ ಅವಶ್ಯಕತೆ ಇದೆ, ಸರ್ಕಾರಕ್ಕೆ ಇನ್ನೊಂದಿಷ್ಟು ಶಕ್ತಿ ಬೇಕು, ಧೈರ್ಯ ಬೇಕು ಎನ್ನುವುದಾದರೆ ಆ ಧೈರ್ಯವನ್ನು ನಾವು ಕೊಡುವುದಕ್ಕೆ ತಯಾರಾಗಿದ್ದೇವೆ. ಏನೂ ಹೆದರಿಕೊಳ್ಳಬೇಕಾದಂಥ ಅವಶ್ಯಕತೆ ಇಲ್ಲ. ದಯಮಾಡಿ ನಾನು ಹೇಳುತ್ತಿದ್ದೇನೆ, ಇಂಡಸ್ಟ್ರೀಸ್‌ಗಳು ಸಾಯಬಾರದು. ಲಕ್ಷಾಂತರ ಜನ ಕಾರ್ಮಿಕರು ಇದರ ಮೇಲೆ ಅವಲಂಬಿಸಿಕೊಂಡಿದ್ದಾರೆ. ಇದು ನಿಂತ ತಕ್ಷಣವೇ ಅವರ ಹೊಟ್ಟೆ ತುಂಬಿಸಿಕೊಳ್ಳುವುದಕ್ಕಾಗುವುದಿಲ್ಲ. ಇಂತಹ ಸನ್ನಿವೇಶದಲ್ಲಿ ಎಲ್ಲರಿಗೂ ಅನುಕೂಲವಾಗುವ ಹಾಗೆ ಒಂದು ತೀರ್ಮಾನವನ್ನು ಕೊಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ.

ಅಧ್ಯಕ್ಷರು : ತಾವೂ ಏನಾದರೂ ಉತ್ತರವನ್ನು ಹೇಳುವುದು ಇದ್ದರೆ ಹೇಳಿ.

†ಶ್ರೀ ಅಲ್ಲಂ ವೀರಭದ್ರಪ್ಪ (ವಾರ್ತಾ ಮತ್ತು ಜೀವಿ ಪರಿಸರಶಾಸ್ತ್ರ ಸಚಿವರು) : ಮಾನ್ಯ ಅಧ್ಯಕ್ಷರೆ, ನಾನು ಮಂತ್ರಿಯಾಗಿ ಮೂರು ನಾಲ್ಕು ಸಲ ಸಿನೆಮಾ ಮಾಲೀಕರನ್ನು, ನಿರ್ಮಾಪಕರನ್ನು ಹಾಗೂ ಡಿಸ್ಟ್ರಿಬ್ಯೂಟರ್ಸ್‌ನ್ನು ಫಿಲ್ಮ್ ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷರನ್ನು ಹಾಗೂ ಪದಾಧಿಕಾರಿಗಳನ್ನು ಕರೆದಿದ್ದೇನೆ. ನಾನು ಬಹಳಷ್ಟು ಸಲ ಅವರಿಂದ ತೀರ್ಮಾನ ಬರಬೇಕು, ನಾವು ನಮ್ಮ ಸರ್ಕಾರದಿಂದ ಯಾವ ತೀರ್ಮಾನವನ್ನು ತೆಗೆದುಕೊಳ್ಳಬಾರದು ಆ ಉದ್ಯಮದವರೇ ಒಂದು ನಿರ್ಣಯಕ್ಕೆ ಬರಲಿ ಎಂದು ಮೂರು ಮೀಟಿಂಗ್‌ಗಳನ್ನು ಮಾಡಿದೆ. ಇವತ್ತು ಶಾಸಕರುಗಳು ಏನು ಹೇಳಿದ್ದಾರೆ, ಆ ಪರಿಸ್ಥಿತಿ ನಿಜವಿದೆ. ಇವತ್ತು ಸರ್ಕಾರದಿಂದ ಏನು ಸರ್ವೀಸ್ ಟ್ಯಾಕ್ಸ್ ಮಾಡಿದ್ದೇವೆ, ಪ್ರೇಕ್ಷಕರಿಗೆ ಒಳ್ಳೆಯ ವ್ಯವಸ್ಥೆಯನ್ನು ಕೊಡಬೇಕು, ಒಳ್ಳೆಯ ಚೇರ್‌ಗಳನ್ನು ಕೊಡಬೇಕು ಡಿಟಿಎಸ್ ಸಿಸ್ಟಮ್‌ಗೆ ತಕ್ಕಂತೆ ಹೊಸ ಹೊಸ ತಾಂತ್ರಿಕ ಸೌಂಡ್ ಸಿಸ್ಟಮ್ ಕೊಡಬೇಕು ಎನ್ನತಕ್ಕಂಥ ಹಿನ್ನಲೆಯಲ್ಲಿ ನಾವು ಕೊಟ್ಟಿರುತ್ತೇವೆ. ಕೆಲವು ಥಿಯೇಟರ್‌ಗಳಲ್ಲಿ ನಿಜವಾಗಿಯೂ ಮಾಡಿದ್ದಾರೆ, ಕೆಲವು ಥಿಯೇಟರ್‌ಗಳು ಇನ್ನೂ ಮಾಡುವ ಹಂತದಲ್ಲಿ ಇವೆ. ಇದೊಂದು ಸಮಸ್ಯೆಯಾಗಿದ್ದರೆ, ನಿರ್ಮಾಪಕರೂ ಕೂಡ ಒಂದು ತರಹ ಸಮಸ್ಯೆಯನ್ನು ಹೇಳಿ, ಇವತ್ತು ಸೇವಾಶುಲ್ಕ ಇರುವುದರಿಂದ ಕೆಲವು ಸಲ ಸಿನೆಮಾ ನಡೆದಿದ್ದರೂ ಸಹಿತ ಆ ಸೇವಾಶುಲ್ಕದ ಇಚ್ಛೆಯಿಂದ ಸಿನೆಮಾ ತೆಗೆದು ಹಾಕುವುದರಿಂದ ನಮಗೆ ಬಹಳಷ್ಟು ಲಾಸ್ ಆಗುತ್ತಿದೆ. ಇವತ್ತು ಚಿತ್ರೋದ್ಯಮವನ್ನು ನಾವು ಬಿಡಬೇಕಾಗುತ್ತದೆ, ಮತ್ತು ಬೇರೆ ರಾಜ್ಯಗಳಿಗೆ ನಾವು ಹೋಗಬೇಕಾದ ಪರಿಸ್ಥಿತಿ ಕೂಡ ಬರುತ್ತದೆಂದು ಅವರು ನಮ್ಮ ಮುಂದೆ ಹೇಳಿದ್ದಾರೆ. ಈ ಎರಡು ಸಮಸ್ಯೆಗಳು ಇರುವುದರಿಂದ, ಅದರ ಬಗ್ಗೆ ನೀವೇ ಡಿಸೈಡ್ ಮಾಡಿಕೊಂಡು ಬನ್ನಿ ಎಂದು ಬಹಳಷ್ಟು ಸಲ ಅವಕಾಶಗಳನ್ನು ಕೊಟ್ಟಿರುತ್ತೇವೆ. ಇವತ್ತು ಸಚಿವ ಸಂಪುಟದ ಅಜೆಂಡಾದಲ್ಲಿ ಇಲ್ಲ, ಸ್ಪೆಷಲ್ಲಾಗಿ ಕ್ಯಾಬಿನೆಟ್‌ನಲ್ಲಿ ಬಂದರೂ ಬರಬಹುದು. ಈ ಭಾಗ ಹಾಗೂ ಆ ಭಾಗದ ಸದಸ್ಯರುಗಳು ಏನು ಹೇಳಿದ್ದಾರೆ ಅದರ ಬಗ್ಗೆ ಯಥಾಸ್ಥಿತಿಯಲ್ಲಿ ಕ್ಯಾಬಿನೆಟ್‌ನಲ್ಲಿ ತಂದು ಮುಂದಿನ ಕ್ರಮವನ್ನು ಕ್ಯಾಬಿನೆಟ್‌ನಲ್ಲಿ ತೆಗೆದುಕೊಳ್ಳುತ್ತೇವೆ.

ಈ) ವಿಷಯ:- ಬೆಂಗಳೂರಿನ ಶ್ರೀ ಜಯದೇವ ಹೃದ್ರೋಗ ಸಂಸ್ಥೆಗೆ ಔಷಧ ಸರಬರಾಜು ಮಾಡುವ ಬಗ್ಗೆ

†ಶ್ರೀ ಎಸ್.ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲಿ ಮತ್ತು ರಾಜ್ಯದಲ್ಲಿ ಒಂದು ವಿಚಿತ್ರವಾದ ಪರಿಸ್ಥಿತಿ ಉದ್ಭವವಾಗಿದೆ. ಪಾಕಿಸ್ಥಾನದ ಪುಟ್ಟ ಬಾಲಕಿ ನೂರ್ ಫಾತಿಮಾ ಆಪರೇಶನ್ ಆಯಿತು. ಇಡೀ ದೇಶ ಸಮಾಧಾನದ ನಿಟ್ಟುಸಿರನ್ನು ಬಿಟ್ಟಿದೆ. ಅದೇ ಸಮಯಕ್ಕೆ ಬೆಂಗಳೂರಿನ ಜಯದೇವ ಆಸ್ಪತ್ರೆ ಮುಚ್ಚಿಬಿಟ್ಟಿದೆ. ಜಯದೇವ ಆಸ್ಪತ್ರೆಯ ಆಪರೇಷನ್